**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**<u>ಫೌಜುದಾರಿ ಪ್ರಕರಣ ಸಂಖ್ಯೆ : 31/2024</u>**

**ಚಾ.ಸಾಃ 19, ಫ್ರಾ.ಸಾಃ 07**

| | |
|---|---|
| ಸಾಕ್ಷಿದಾರನ ಹೆಸರು | ಸಂತೋಷ ಕಾಯ್ಕಿಣಿ |
| ತಂದೆಯ ಹೆಸರು | ಆನಂದ ಕಾಯ್ಕಿಣಿ |
| ವಯಸ್ಸು | 42 ವರ್ಷಗಳು |
| ಉದ್ಯೋಗ | ಪೋಲೀಸ್ ವೃತ್ತ-ನಿರೀಕ್ಷಕರು, ಮುರ್ಡೇಶ್ವರ ವೃತ್ತ |
| ವಾಸ್ತವ್ಯ | ಮುರ್ಡೇಶ್ವರ |

**<u>ಸಾಕ್ಷಿಯನ್ನು ದಿನಾಂಕಃ 19-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎಪಿಪಿಯವರಿಂದ,</u>**

ನಾನು ಸಪ್ಟೆಂಬರ್-2023 ರಿಂದ ಫೆಬ್ರುವರಿ-2024 ರವರೆಗೆ ಮತ್ತು ಜೂನ್-2024 ರಿಂದ ನಾನು ಮುರ್ಡೇಶ್ವರ ವೃತ್ತದಲ್ಲಿ ವೃತ್ತನಿರೀಕ್ಷಕನಾಗಿದ್ದು ಈ ಅವಧಿಯಲ್ಲಿ ನಾನು ಹೊನ್ನಾವರ ವೃತ್ತದ ಪ್ರಭಾರ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 20-11-2023 ರಂದು ಈ ಕೇಸಿನ ಕಡತವನ್ನು ಚಾಸಾ-18 ರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಐ ಎಂ ವಿ ವರದಿಯನ್ನು ಪಡೆದಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು, ನಿ.ಪಿ. 19 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 19(ಎ) ಎಂದು ಗುರುತಿಸಲಾಯಿತು.

ದಿಃ 10-12-2023 ರಂದು ಚಾ.ಸಾ. 6 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 23-12-2023 ರಂದು ಅಪಘಾತಕ್ಕೆ ಒಳಗಾಗಿದ್ದ ಮೋಟಾರ್ ಸೈಕಲ್ ಮಾಲೀಕರು ಠಾಣೆಗೆ ಹಾಜರಾಗಿದ್ದು, ಅವರಿಗೆ ಕಲಂ 133 ರಡಿಯಲ್ಲಿ ನೊಟೀಸ್ ನೀಡಿ ಅವರಿಂದ ಉತ್ತರವನ್ನು ಪಡೆದುಕೊಂಡಿರುತ್ತೇನೆ. ನೊಟೀಸನ್ನು ನೋಡುತ್ತಿದ್ದು, ನಿ.ಪಿ. 20 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 20(ಎ) ಎಂದು ಗುರುತಿಸಲಾಯಿತು. ಉತ್ತರವನ್ನು ನೋಡುತ್ತಿದ್ದು, ನಿ.ಪಿ. 21 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 21(ಎ) ಎಂದು ಗುರುತಿಸಲಾಯಿತು. ನಂತರ ಇಂಡೆಮ್ನಿಟಿ ಬಾಂಡ್ ಪಡೆದು ಮೋಟಾರ್ ಸೈಕಲನ್ನು ಅವರ ಸ್ವಾಧೀನಕ್ಕೆ ನೀಡಿರುತ್ತೇನೆ.

ದಿಃ 05-01-2024 ರಂದು ಮೃತ ಶಂಕರ ರವರ ಪಿ ಎಂ ವರದಿಯನ್ನು ಪಡೆದಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು, ನಿ.ಪಿ. 22 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 22(ಎ) ಎಂದು ಗುರುತಿಸಲಾಯಿತು. ದಿಃ 08-02-2024 ರವರು ಕೇಸಿನ ಕಡತವನ್ನು ಚಾ.ಸಾ. 20 ರವರಿಗೆ ವಹಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್.ಎನ್.ಯವರಿಂದಃ</u>**

ಸಾಕ್ಷಿದಾರರು ನನಗೆ ಯಾವುದೇ ಹೇಳಿಕೆಯನ್ನು ನೀಡಿದೇ ಇದ್ದರು ಕೇಸಿಗೆ ಅನುಕೂಲವಾಗುವಂತೆ ಸೃಷ್ಟಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/–

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**